ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ
## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 11–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **National Safety Science Quiz 2014- Inauguration:**<br>**Dr. P. Satischandra,**<br>**Director/Vice Chancellor**<br>**NIMHANS** | **12-11-2014**<br>**Wednesday**<br>**10.00 A.M.** | **Auditorium, Visvesvaraya Industrial and Technological Museum, Kasturba Road, Bangalore** |
| 2 | ಕೆರೆಗಳ ಒತ್ತುವರಿ ಬಗ್ಗೆ ತನಿಖೆ ನಡೆಸಲು ರಚಿತವಾಗಿರುವ ವಿಧಾನಮಂಡಲ ಸದನ ಸಮಿತಿ ಪ್ರಾರಂಭಿಕ ಸಭೆ<br>ಅಧ್ಯಕ್ಷತೆ:<br>ಶ್ರೀ ಕೆ.ಬಿ. ಕೋಳಿವಾಡ, ಶಾಸಕರು ಹಾಗೂ ಅಧ್ಯಕ್ಷರು,<br>ಕೆರೆಗಳ ಒತ್ತುವರಿ ಬಗ್ಗೆ ತನಿಖೆ ನಡೆಸಲು ರಚಿತವಾಗಿರುವ ವಿಧಾನಮಂಡಲ ಸದನ ಸಮಿತಿ | 12–11–2014<br>ಬುಧವಾರ<br>ಬೆಳಗ್ಗೆ<br>11–00 ಗಂಟೆಗೆ | ಕೊಠಡಿ ಸಂಖ್ಯೆ 110<br>ಮೊದಲ ಮಹಡಿ,<br>ವಿಧಾನ ಸೌಧ<br>ಬೆಂಗಳೂರು |
| 3 | ಪತ್ರಿಕಾಗೋಷ್ಠಿ:<br>ಕ್ಯುರೇಟರ್,<br>ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ<br>ಬೆಂಗಳೂರು | 12–11–2014<br>ಬುಧವಾರ<br>ಮಧ್ಯಾಹ್ನ<br>3–00 ಗಂಟೆಗೆ | ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯ<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಸಚಿವ ಸಂಪುಟ ಸಭೆ

ಬೆಂಗಳೂರು, ನ.11 (ಕರ್ನಾಟಕ ವಾರ್ತೆ)-

ರಾಜ್ಯ ಸಚಿವ ಸಂಪುಟ ಸಭೆಯು ನವೆಂಬರ್ 12 ರಂದು ಸಂಜೆ 4-00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಬಾಬು/ಕೆಎಂ

# ಖಾಲಿ ಇರುವ ಗ್ರಾಮ ಪಂಚಾಯತಿ ಸದಸ್ಯರ ಆಯ್ಕೆಗೆ ಚುನಾವಣೆ

ಬೆಂಗಳೂರು, ನ.11 (ಕರ್ನಾಟಕ ವಾರ್ತೆ):

ರಾಜ್ಯ ಚುನಾವಣಾ ಆಯೋಗವು ರಾಜ್ಯಾದ್ಯಂತ ಗ್ರಾಮಪಂಚಾಯತಿಗಳಲ್ಲಿ ಖಾಲಿ ಇರುವ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಸಲು ವೇಳಾಪಟ್ಟಿ ಪ್ರಕಟಿಸಿದೆ.

ಈ ಗ್ರಾಮ ಪಂಚಾಯತಿ ಚುನಾವಣೆ ನಡೆಯುವ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾತ್ರ ಚುನಾವಣಾ ನೀತಿ ಸಂಹಿತೆಯು ನವೆಂಬರ್ 19 ರಿಂದ ಡಿಸೆಂಬರ್ 10 ರವರೆಗೆ ಜಾರಿಯಲ್ಲಿರುತ್ತದೆ. ಇದು ಬರಕಾಮಗಾರಿ, ಪ್ರವಾಹ ಇತ್ಯಾದಿ ಪ್ರಕೃತಿ ವಿಕೋಪ ಕಾರ್ಯಕ್ರಮಗಳಿಗೆ ಅನ್ವಯಿಸುವುದಿಲ್ಲ.

ನಾಮಪತ್ರಗಳನ್ನು ನವೆಂಬರ್ 19 ರಿಂದ ಸ್ವೀಕರಿಸಲಿದ್ದು ನಾಮಪತ್ರ ಸಲ್ಲಿಕೆಗೆ ನವೆಂಬರ್ 26 ಕೊನೆಯ ದಿನವಾಗಿದೆ. ಮತದಾನವು ಡಿಸೆಂಬರ್ 7 ರಂದು ನಡೆಯಲಿದೆ. ಮತಗಳ ಎಣಿಕೆಕಾರ್ಯ ಡಿಸೆಂಬರ್ 9 ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಬಾಬು/ಕೆಎಂ

# ಸೈನ್ಯಕ್ಕೆ ಭರ್ತಿ

ಬೆಂಗಳೂರು, ನ.11 (ಕರ್ನಾಟಕ ವಾರ್ತೆ)

ಬೆಂಗಳೂರಿನ ಕೇಂದ್ರಸ್ಥಾನ ಸೇನಾ ನೇಮಕಾತಿ ವಲಯವು ನವೆಂಬರ್ 18 ರಿಂದ 22 ರವರೆಗೆ ತುಮಕೂರಿನ ಮಹಾತ್ಮಾಗಾಂಧಿ ಕ್ರೀಡಾಂಗಣದಲ್ಲಿ ನೇಮಕಾತಿ ರ್‍ಯಾಲಿ ನಡೆಸಲಿದೆ. ಆಸಕ್ತ ಯುವಕರು ನವೆಂಬರ್ 18 ರಂದು ಸೈನಿಕ ಲಿಪಿಕ/ಉಗ್ರಾಣ ಪಾಲಕ ತಾಂತ್ರಿಕ ಹುದ್ದೆಗಳಿಗೆ, ನವೆಂಬರ್ 19 ರಂದು

ಟ್ರೇಡ್ಸ್‌ಮನ್ ಹುದ್ದೆಗಳಿಗೆ ಹಾಗೂ ನವೆಂಬರ್ 22 ರಂದು ಸೈನಿಕ ಸಾಮಾನ್ಯ ಕರ್ತವ್ಯ ತಾಂತ್ರಿಕ ಮತ್ತು ಸೈನಿಕ ಶೂಶ್ರೂಷಕ ಹುದ್ದೆಗಳಿಗೆ ಪುನರಾಯ್ಕೆಗೆ ಅವಕಾಶ ಕಲ್ಪಿಸಲಾಗಿದೆ.

ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಮೇಲೆ ತಿಳಿಸಿದ ದಿನಾಂಕದ ಒಂದು ದಿನ ಮೊದಲು ಭರ್ತಿ ಸ್ಥಳದಲ್ಲಿ ಟೋಕನ್‌ಗಳನ್ನು ಪಡೆಯಬೇಕು ಹಾಗೂ ಹೆಚ್ಚಿನ ಮಾಹಿತಿಗಾಗಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಭವನ ಬೆಂಗಳೂರು -560 025 ಇಲ್ಲಿ ಸೂಚನ ಫಲಕವನ್ನು ವೀಕ್ಷಿಸಬಹುದಾಗಿದೆ.

ಬಾಬು/ಕೆಎಂ

## ಮೇಕೆದಾಟು ಕುಡಿಯುವ ನೀರಿನ ಯೋಜನೆ ಅನುಷ್ಠಾನ

ಬೆಂಗಳೂರು, ನ.11 (ಕರ್ನಾಟಕ ವಾರ್ತೆ)

ಮೇಕೆದಾಟು ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ತರುವ ಸಂಬಂಧ ಸರ್ಕಾರ ಚಿಂತನೆ ನಡೆಸಿದೆ ಎಂದು ರಾಜ್ಯ ಜಲ ಸಂಪನ್ಮೂಲ ಸಚಿವ ಶ್ರೀ ಎಂ.ಬಿ. ಪಾಟೀಲ ಅವರು ತಿಳಿಸಿದರು. ವಿಧಾನ ಸೌಧದ ತಮ್ಮ ಕಚೇರಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಈ ಯೋಜನೆ ಜಾರಿಗೆ ತರುವುದರಲ್ಲಿ ಯಾವುದೇ ತೊಂದರೆ ಆಗುವುದಿಲ್ಲ ಎಂದು ಸುಪ್ರೀಂಕೋರ್ಟಿನಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸುತ್ತಿರುವ ಹಿರಿಯ ನ್ಯಾಯವಾದಿ ಶ್ರೀ ಫಾಲಿ ಎಫ್ ನಾರಿಮನ್ ಅವರು ನನ್ನೊಟ್ಟಿಗೆ ಮಾತನಾಡುವಾಗ ತಿಳಿಸಿರುವುದರಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಜಲಾಶಯ ನಿರ್ಮಾಣಕ್ಕೆ ಮೇಕೆದಾಟಿನಲ್ಲಿ ಈಗಾಗಲೇ ಒಟ್ಟು 22 ಕಡೆ ಸ್ಥಳ ಗುರುತಿಸಲಾಗಿದ್ದು ಇದರಲ್ಲಿ ಒಂದು ಕಡೆ ಜಲಾಶಯದ ಕಾಮಗಾರಿ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದ ಸಚಿವರು ಈ ಯೋಜನೆಯು ಪೂರ್ಣಗೊಂಡಲ್ಲಿ ಸುಮಾರು 48 ಟಿ.ಎಂ.ಸಿ. ನೀರು ಸಂಗ್ರಹ ಮಾಡಬಹುದಾಗಿದೆ ಎಂದು ತಿಳಿಸಿ ಇದರಿಂದ ಬೆಂಗಳೂರು ಸೇರಿದಂತೆ ಮೈಸೂರಿನ ಹಲವು ಭಾಗಗಳಿಗೆ ಕುಡಿಯುವ ನೀರು ಒದಗಿಸಬಹುದಾಗಿದೆ ಎಂದು ಹೇಳಿದರು.

ಮೇಕೆದಾಟು ಯೋಜನೆ ಅನುಷ್ಠಾನ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ವರದಿ ತಯಾರು ಮಾಡಲಾಗುವುದು ಎಂದ ಸಚಿವರು ಈ ವರದಿಯನ್ನು ಕೇಂದ್ರ ಜಲಮಂಡಳಿ ಯೋಜನಾ ಸಮಿತಿಗೆ ಕಳುಹಿಸಿಕೊಡಲಾಗುವುದು ಎಂದರು.

ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ಕಬ್ಬು ಬೆಳೆಯುವ ಪ್ರದೇಶಗಳನ್ನು ಹನಿ ನೀರಾವರಿ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ ಎಂದ ಸಚಿವರು ಈ ಯೋಜನೆಗೆ ಒಟ್ಟು 4,500 ಕೋಟಿ ರೂ. ಹಣದ ಅಗತ್ಯವಿದೆ ಎಂದು ಹೇಳಿದರು.

ಕಬ್ಬು ಬೆಳೆಗಾರರು ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಹಾಯಧನ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದ ಸಚಿವರು ಕಬ್ಬು ಬೆಳೆಗೆ ಹೆಚ್ಚು ನೀರು ಬಳಕೆಯಾಗುತ್ತಿದೆ. ಹನಿ ನೀರಾವರಿ

ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ಪ್ರತಿ ವರ್ಷ ಸುಮಾರು 180 ಟಿ.ಎಂ.ಸಿ. ನೀರನ್ನು ಉಳಿತಾಯ ಮಾಡಬಹುದಾಗಿದೆ ಎಂದರು. ಗುಣಮಟ್ಟದ ಹನಿ ನೀರಾವರಿ ಸೌಲಭ್ಯ ಕಲ್ಪಿಸಲು ತಲಾ 40,000 ರೂ. ವೆಚ್ಚವಾಗುತ್ತಿದೆ. ನೀರಾವರಿ ಇಲಾಖೆಯಿಂದ ರೈತರಿಗೆ 10,000 ರೂ. ಸಕ್ಕರೆ ಕಾರ್ಖಾನೆಗಳ ವತಿಯಿಂದ 5,000 ರೂ. ಸಹಾಯಧನ ನೀಡಲು ಉದ್ದೇಶಿಸಲಾಗಿದೆ. ಉಳಿಕೆ ಹಣವನ್ನು ಸಾಲದ ರೂಪದಲ್ಲಿ ಪಡೆಯಲು ಈಗಾಗಲೆ ಸಕ್ಕರೆ ಕಾರ್ಖಾನೆ ಮಾಲೀಕರೊಟ್ಟಿಗೆ ಮಾತನಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಹನಿ ನೀರಾವರಿ ಪದ್ಧತಿ ಅಳವಡಿಕೆಯಿಂದ ರೈತರ ಕಬ್ಬಿನ ಇಳುವರಿಯಲ್ಲಿ ದುಪ್ಪಟವಾಗುತ್ತಿದೆ ಈಗಾಗಲೇ ಹಲವು ರೈತರು ಈ ಪದ್ಧತಿ ಅಳವಡಿಸಿಕೊಂಡಿದ್ದಾರೆ ಎಂದು ತಿಳಿಸಿದರು. ಕೃಷ್ಣಾ ಎಡದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಳು 2016 ರ ಹೊತ್ತಿಗೆ ಪೂರ್ಣಗೊಳ್ಳಲಿದೆ ಎಂದ ಸಚಿವರು ಎತ್ತಿನ ಹೊಳೆ ಯೋಜನೆ ಜಾರಿಗೆ ತರುವಲ್ಲಿ ಯಾವ ಗೊಂದಲಗಳಿಲ್ಲ. ಯೋಜನೆ ಜಾರಿಗೊಳಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದ ಸಚಿವರು ತುಂಗಭದ್ರಾ ಜಲಾಶಯದ ಹೂಳು ತೆಗೆಯುವ ಕೆಲಸಕ್ಕೆ ಜಾಗತಿಕ ಮಟ್ಟದಲ್ಲಿ ಟೆಂಡರ್ ಕರೆಯಲಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಬಾಬು/ಕೆಪಿಪಿ/ಕೆಎಂ

## ಮರುನಾಮಕರಣ

ಬೆಂಗಳೂರು, ನ.11 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ ಸಂಸ್ಥೆಯ ಹೆಸರನ್ನು ಕರ್ನಾಟಕ ರಾಜ್ಯ ಪೋಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (**Karnataka State Police Housing and Infrastructure Development Corporation Limited**) ಎಂದು ಬದಲಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ